**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 3 ಫ್ರಾ.ಸಾ. : 2**

ಸಾಕ್ಷಿಯ ಹೆಸರು : ರಾಮಪ್ಪ ಎಲ್.ಡಿ.
ತಂದೆಯ ಹೆಸರು : ದೇವಪ್ಪ
ವಯಸ್ಸು : 72 ವರ್ಷ
ಉದ್ಯೋಗ : ಕೃಷಿ
ವಾಸ : ಶಿರವಂತೆ , ಸಾಗರ , ಶಿವಮೊಗ್ಗ

**ದಿನಾಂಕಃ 16-02-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಸಿದ್ದಾಪುರದ ತಹಶೀಲ್ದಾರರವರ ಕಚೇರಿಯಲ್ಲಿ 2005 ರಿಂದ 2007 ರವರೆಗೆ ಸರ್ವೆ ವಿಭಾಗದ ಪರ್ಯಾಯವೇಕ್ಷಕರು ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ . ದಿನಾಂಕ 08.09.2005 ರಿಂದ 11.09.2005 ರವರೆಗೆ ನಮ್ಮ ತಹಶೀಲ್ದಾರರವರ ಆದೇಶದ ಮೇರೆಗೆ ನಾನು ಲೋಕಾಯುಕ್ತ ಪೊಲೀಸ್ ನಿರೀಕ್ಷಕರ ಜೊತೆ ಸಿದ್ದಾಪುರ ತಾಲೂಕಿನ ಕಾನಗೋಡು ಗ್ರಾಮಕ್ಕೆ ಹೋಗಿದ್ದೆ . ಶೌಚಾಲಯಗಳನ್ನು ಮಂಜೂರಾದ ಪ್ರಕಾರ ಕಟ್ಟಿಲ್ಲ ಎಂಬ ದೂರಿನ ಬಗ್ಗೆ ಸ್ಥಳದ ತನಿಖೆ ಮಾಡಲು ಲೋಕಾಯುಕ್ತ ನಿರೀಕ್ಷಕರಿಗೆ ಸಹಕರಿಸಲು ಮತ್ತು ಪಂಚನಾಗಿ ಹೋಗುವಂತೆ ನನ್ನನ್ನು ಕಳುಹಿಸಿದ್ದರು . ಚಾಸಾ-4 ಸಹ ಪಂಚರಾಗಿ ನನ್ನ ಜೊತೆ ಬಂದಿದ್ದರು . ಮೇಲ್ಕಂಡ ದಿನಾಂಕಗಳಂದು ಸದರಿ ಗ್ರಾಮದಲ್ಲಿ ಒಂದು ಕಡೆಯಿಂದ ಎಲ್ಲಾ ಮನೆಗಳನ್ನು ಅಲ್ಲಿ ನಿರ್ಮಿಸಿರುವ ಫಲಾನುಭವಿಗಳ ಯಾದಿ ಪ್ರಕಾರ ಶೌಚಾಲಯ ಇದೆಯೋ ಇಲ್ಲವೋ ಎಂದು ತಪಾಸಣೆ ಮಾಡಿದೆವು . ಯಾದಿ ಪ್ರಕಾರ ಶೌಚಾಲಯ ನಿರ್ಮಾಣ ಆಗಿರುವುದು ಕಂಡು ಬಂದಾಗ ಯಾದಿಯಲ್ಲಿ ಆ ಕ್ರಮ ಸಂಖ್ಯೆಗೆ ಟಿಕ್ ಮಾಡಿಕೊಂಡಿರುತ್ತೇನೆ . ನಾವು ತಪಾಸಣೆ ಮಾಡಿದ ಶೌಚಾಲಯದ ಯಾದಿ ಗುರುತಿಸುತ್ತೇನೆ . ಈಗ ಆ ಯಾದಿಯನ್ನು ನೋಡಿರುತ್ತೇನೆ. ಅದರಲ್ಲಿ ನಾನು ರುಜು ಮಾಡಿದ್ದೇನೆ . ಆ ಯಾದಿಯನ್ನು ಈಗಾಗಲೇ ನಿ.ಪಿ. 28/1 ರಿಂದ ನಿ.ಪಿ. 28/3 ಎಂದು ಗುರುತಿಸಲಾಗಿದೆ . ನಿ.ಪಿ. 28/1(ಬಿ) ರಿಂದ 28/3(ಬಿ) ನನ್ನ ರುಜು ಆಗಿದೆ. ಆ ಬಗ್ಗೆ ಪಂಚನಾಮೆಯನ್ನು ತನಿಖಾಧಿಕಾರಿ ಮಾಡಿದರು . ಅದಕ್ಕೆ ನಾನು ರುಜು

ಮಾಡಿದ್ದೇನೆ . ನಿ.ಪಿ. 28 ಆ ಪಂಚನಾಮೆಯಾಗಿದೆ . ನಿ.ಪಿ. 28(ಬಿ) ನನ್ನ ರುಜು ಆಗಿದೆ . ನಿ.ಪಿ. 28/1 ರಿಂದ 3 ಯಾದಿಗಳಲ್ಲಿ ಅಂಕಣ 4 ರಲ್ಲಿ ಸ್ವಚ್ಛ ಗ್ರಾಮ ಯೋಜನೆ ಹಣದಲ್ಲಿ ಶೌಚಾಲಯ ನಿರ್ಮಿಸಿರುವುದನ್ನು ಟಿಕ್ ಮಾಡಲಾಗಿದೆ . ಅಂಕಣ 5 ರಲ್ಲಿ ಸ್ವಂತ ಹಣದಲ್ಲಿ ಕಟ್ಟಿಕೊಂಡಿರುವ ಬಗ್ಗೆ ಟಿಕ್ ಮಾಡಲಾಗಿದೆ ಹಾಗೂ ಅಂಕಣ 6 ರಲ್ಲಿ ನಮ್ಮ ತಪಾಸಣೆ ಸಮಯದಲ್ಲಿ ಶೌಚಾಲಯ ನಿರ್ಮಾಣ ಆಗದಿದ್ದ ಬಗ್ಗೆ ಟಿಕ್ ಮಾಡಲಾಗಿದೆ. ನಾನು ನಿ.ಪಿ. 28 ಹಾಗೂ 28/1 ರಿಂದ 3 ದಾಖಲಾತಿಗಳಲ್ಲಿ ಇರುವ ವಿಚಾರಗಳನ್ನು ತಿಳಿದುಕೊಂಡು ಅವುಗಳಿಗೆ ರುಜು ಮಾಡಿದ್ದೇನೆ . ಅದರಲ್ಲಿ ಬರೆದಿರುವುದು ನಿಜ ಸ್ಥಿತಿ ಇರುತ್ತದೆ . ನಿ.ಪಿ.28 ಪಂಚನಾಮೆಯನ್ನು ದಿನಾಂಕ 08.09.2005 ರಂದು ಪ್ರಾರಂಭಿಸಿ ದಿನಾಂಕ 11.09.2005 ರಂದು ಮುಕ್ತಾಯ ಮಾಡಲಾಗಿದೆ . ಆ ಪಂಚನಾಮೆಯಲ್ಲಿ ಆಯಾ ದಿನ ಏನು ತಪಾಸಣೆ ಮಾಡಿದೆವೋ ಅದನ್ನು ಅದೇ ದಿನಗಳಲ್ಲಿ ಬರೆದುಕೊಳ್ಳಲಾಗಿದೆ .

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದ**

2. ಲೋಕಾಯುಕ್ತ ಅಧಿಕಾರಿ ನನಗೆ ನೇರವಾಗಿ ಪಂಚನಾಗಿ ಬರುವಂತೆ ತಿಳುವಳಿಕೆ ಪತ್ರ ಕೊಟ್ಟಿರಲಿಲ್ಲ ಆದರೆ ನಮ್ಮ ಕಚೇರಿಯ ಮೇಲಾಧಿಕಾರಿಯಾದ ತಹಶೀಲ್ದಾರರವರಿಗೆ ಕೊಟ್ಟಿದ್ದರು . ನನ್ನ ಮೇಲಾಧಿಕಾರಿ ನನಗೆ ಲಿಖಿತವಾಗಿ ಪಂಚನಾಮೆಗೆ ಲೋಕಾಯುಕ್ತ ಅಧಿಕಾರಿ ಜೊತೆ ಹೋಗುವಂತೆ ತಿಳುವಳಿಕೆ ಪತ್ರ ಕೊಟ್ಟಿಲ್ಲ ಎಂದರೆ ಸರಿಯಲ್ಲ . ನನ್ನ ಮೇಲಾಧಿಕಾರಿ ಆ ರೀತಿ ನನಗೆ ತಿಳುವಳಿಕೆ ಪತ್ರ ಕೊಟ್ಟಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಮ್ಮ ಕಚೇರಿಯಲ್ಲಿ ನಾವು ಎಲ್ಲಿ ಎಲ್ಲಿ ಕರ್ತವ್ಯ ನಿರ್ವಹಿಸಿದ್ದೇವೆ ಎಂದು ನಮೂದಿಸುವ ದಿನ ವಹಿ ಇರುತ್ತದೆ ಎಂದರೆ ಹೌದು . ನಾನಾಗಲಿ ತಹಶೀಲ್ದಾರಾಗಲಿ ಆ ವಹಿಯನ್ನು ಲೋಕಾಯುಕ್ತ ಪೊಲೀಸ್‌ನವರಿಗೆ ಕೊಟ್ಟಿಲ್ಲ . ಪಂಚನಾಮೆಯನ್ನು ಕಾನಗೋಡು ಮಂಡಳ ಪಂಚಾಯತ ಕಚೇರಿಯಲ್ಲಿ ಬರೆಯಲಾಯಿತು . ನಾನು ಹೇಳಿರುವ ಮೇಲ್ಕಂಡ ಎಲ್ಲಾ ಸಹಿಗಳನ್ನು ಕಾನಗೋಡು ಮಂಡಳ ಪಂಚಾಯತಿ ಕಚೇರಿಯಲ್ಲಿ ಹಾಕಿರುತ್ತೇನೆ. ನಿ.ಪಿ. 28/1 ರಿಂದ 3 ಈಗ ತೋರಿಸಿದ ಯಾದಿಗಳ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ನನ್ನ ಎದುರುಗಡೆ ಅದನ್ನು ಮಾಡಿದ್ದಾರೆ ನಾನು ಅದನ್ನು ನೋಡಿ ಸಹಿ ಮಾಡಿದ್ದೇನೆ. ನಿ.ಪಿ. 28 ಮತ್ತು ನಿ.ಪಿ. 28/1 ರಿಂದ 3 ಅನ್ನು ಕಾನಗೋಡು

ಮಂಡಳ ಪಂಚಾಯತಿ ಕಚೇರಿಯಲ್ಲಿ ತಯಾರಿಸಿದ್ದಾರೆ ಎಂದರೆ ಹೌದು. ಆ ದಾಖಲಾತಿಗಳನ್ನು ಮತ್ತು ಪಂಚನಾಮೆಯನ್ನು ಈ ರೀತಿ ಬರೆಯಿರಿ ಎಂದು ನಾನು ಹೇಳಿ ಬರೆಸಿಲ್ಲ . ಲೋಕಾಯುಕ್ತ ಪೊಲೀಸ್‌ನವರು ತಯಾರಿಸಿದ ದಾಖಲಾತಿಗೆ ನಾನು ಸಹಿ ಮಾಡಿದ್ದೇನೆ ಎಂದರೆ ಹೌದು. ನಾವು ಮೇಲ್ಕಂಡ ಯಾದಿಗಳಲ್ಲಿ ನಮೂದಿಸಿರುವ ಮನೆಗಳನ್ನು ಭೇಟಿ ಮಾಡಿದ್ದೇವೆ ಎಂಬ ಬಗ್ಗೆ ಆ ಮನೆಯವರ ರುಜುಗಳನ್ನು ಪಡೆದಿರುವುದಿಲ್ಲ . ನಾವು ಪ್ರಥಮವಾಗಿ ಯಾರ ಮನೆಗೆ ಭೇಟಿ ಕೊಟ್ಟೆವು ಮತ್ತು ತಪಾಸಣೆ ಮಾಡಿದೆವು ಎಂದು ನೆನಪಿಲ್ಲ . ನಿ.ಪಿ. 28/1 ರಿಂದ 3 ಯಾದಿಗಳಲ್ಲಿ ಲೋಕಾಯುಕ್ತ ಪೊಲೀಸ್‌ನವರು ಟಿಕ್ ಮಾಡಿದ್ದಾರೆ . ಅದನ್ನು ಟಿಕ್ ಮಾಡಿದ ಲೋಕಾಯುಕ್ತ ಅಧಿಕಾರಿ ಹೆಸರು ನನಗೆ ಗೊತ್ತಿಲ್ಲ . ಕಾನಗೋಡು ಮಂಡಳ ಪಂಚಾಯತಿ ಕಚೇರಿಯಲ್ಲಿ ಆ ಟಿಕ್ ಮಾಡಿದ್ದಾರೆ ಎಂದರೆ ಹೌದು . ನಾವು ಭೇಟಿ ಮಾಡಿದ ಮನೆಗಳಲ್ಲಿ ಶೌಚಾಲಯ ಇದೆಯೋ ಇಲ್ಲವೋ ಎಂಬ ಬಗ್ಗೆ ಛಾಯಾ ಚಿತ್ರಗಳನ್ನು ಆಗ ತೆಗೆದಿರುವುದಿಲ್ಲ . ತಪಾಸಣೆ ಮಾಡಿದ ಮನೆಗಳ ಒಳಗಡೆ ಪಂಚನಾಮೆ ಬರೆದಿಲ್ಲ ಪಂಚನಾಮೆಯನ್ನು ಕಾನಗೋಡು ಮಂಡಳ ಪಂಚಾಯತಿ ಕಚೇರಿಯಲ್ಲಿ ಬರೆಯಲಾಗಿದೆ . ಶೌಚಾಲಯ ಕಟ್ಟಿದ್ದರೋ ಇಲ್ಲವೋ ಎಂಬುದು ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಹೌದು. ನಾನು ಕಾನಗೋಡು ಗ್ರಾಮದಲ್ಲಿ ಯಾವುದೇ ಮನೆಗಳಿಗೆ ಲೋಕಾಯುಕ್ತ ಪೊಲೀಸ್‌ನವರ ಜೊತೆ ಹೋಗಿಲ್ಲ ಮತ್ತು ಅಲ್ಲಿ ಶೌಚಾಲಯ ನಿರ್ಮಿಸಿದ್ದಾರೋ ಇಲ್ಲವೋ ಎಂಬುದನ್ನು ನನ್ನ ಸಮಕ್ಷಮ ತಪಾಸಣೆ ಮಾಡಿಲ್ಲ ಎಂದರೆ ಸರಿಯಲ್ಲ . ಮೇಲ್ಕಂಡ ಯಾದಿಗಳನ್ನು ತಪಾಸಣೆ ಮಾಡಿ ತಯಾರಿಸಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವತ್ತೂ ಪಂಚನಾಗಿ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಲೋಕಾಯುಕ್ತ ಪೊಲೀಸ್‌ನವರು ತಯಾರಿಸಿದ ಪಂಚನಾಮೆ ಮತ್ತು ಯಾದಿಗಳಿಗೆ ನನ್ನ ಕಚೇರಿಗೆ ಬಂದು ಅವರು ರುಜುವನ್ನು ನನ್ನಿಂದ ಪಡೆದಿದ್ದಾರೆ ಎಂದರೆ ಸರಿಯಲ್ಲ . ನಾನು ಆ ದಾಖಲಾತಿಗಳನ್ನು ನೋಡದೇ ಪರಿಶೀಲನೆ ಮಾಡದೇ ಲೋಕಾಯುಕ್ತ ಪೊಲೀಸ್‌ನವರು ಬಂದಿದ್ದಾರೆ ಎಂದು ಹೆದರಿಕೊಂಡು ಅವುಗಳಿಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ . ಲೋಕಾಯುಕ್ತ ಪೊಲೀಸ್‌ನವರು ಹೇಳಿಕೊಟ್ಟ ಪ್ರಕಾರ ಹೆದರಿಕೊಂಡು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**<u>ಮರು ವಿಚಾರಣೆಃ – ಇಲ್ಲ –</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ